2016 ಕ.ತೀ.ವ 1107

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪ್ರದೀಪ್ ಡಿ. ವೈಂಗಣಕರ

**ಶ್ರೀಮತಿ ಗೀತಾ ಮತ್ತು ಇತರರು –ವಿರುದ್ಧ– ಎಂ. ಸುಶೀಲಾ ಮತ್ತು ಇತರರು***

**1988ರ ಮೋಟಾರು ವಾಹನ ಅಧಿನಿಯಮ ಕಲಂ 173(1)ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.**

**ಅಪಘಾತವೊಂದರಲ್ಲಿ ಮೃತಪಟ್ಟ ವ್ಯಕ್ತಿಯ ಹೆಂಡತಿ ಹಾಗೂ ಮಕ್ಕಳು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ ಹೊರಡಿಸಿದ ನ್ಯಾಯಾಧೀಕರಣದ ಐತೀರ್ಪಿನ ಕ್ರಮವನ್ನು ಪ್ರಶ್ನಿಸಿ ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಸದರಿ ಸಂಕೀರ್ಣ ಮೊದಲನೇ ಮೇಲ್ಮನವಿ.**

**ವಾದ ವಿವಾದಗಳನ್ನು ಆಲಿಸಿ, ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು ವಿವಿಧ ಶೀರ್ಷಿಕೆಗಳಡಿಯಲ್ಲಿ ಪರಿಹಾರ ಮೊತ್ತವನ್ನು ಹೆಚ್ಚಿಸುತ್ತಾ ಒಟ್ಟು ಪರಿಹಾರ ಮೊತ್ತವನ್ನು 3,46,800/– ಗಳಷ್ಟು ಹೆಚ್ಚಿಸಿ ಸದರಿ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆ*** | ***ಪ್ಯಾರಾದಲ್ಲಿ*** |
|---|---|
| *1. 2009 ಎಸಿಜೆ 1298* | |
| *ಸರಳ ವರ್ಮಾ ಪ್ರಕರಣ* | *(ಉಲ್ಲೇ) 11* |

*ಸಂಕೀರ್ಣ ಮೊದಲನೇ ಮೇಲ್ಮನವಿ ಸಂ. 7899/2014 (ಎಂ.ವಿ.), ದಿನಾಂಕ: 2ನೇ ನವೆಂಬರ್, 2015.

ಅಪೀಲುದಾರರ ಪರ: ಶ್ರೀ ಆರ್. ಶಶಿಧರ, ವಕೀಲರು;
2ನೇ ಪ್ರತ್ಯಪೀಲುದಾರರ ಪರ: ಶ್ರೀ ಓ.ಮಹೇಶ್, ವಕೀಲರು
1, 3 ಮತ್ತು 4ನೇ ಪ್ರತ್ಯಪೀಲುದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತಿನಿಧಿಸಿರುವುದಿಲ್ಲ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್:**

ಈ ವಿಷಯವನ್ನು, ಅಂಗೀಕಾರಕ್ಕಾಗಿ ಮುಂದಕ್ಕೆ ಹಾಕಲಾಗಿದ್ದರೂ, ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ ಅಂತಿಮ ವಿಲೆಗಾಗಿ ಇದನ್ನು ಕೈಗೆತ್ತಿಕೊಳ್ಳಲಾಗಿದೆ.

2. ತಮ್ಮ ಕ್ಲೇಮು 22,50,000/– ರೂಪಾಯಿಗಳಿಗೆ ಬದಲಾಗಿ ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಸಹಾಯಕಾರಿ ನಿರ್ಲಕ್ಷ್ಯತೆ ಸಲುವಾಗಿ ಶೇಕಡಾ 15 ರಷ್ಟು ಕಡಿತಗೊಳಿಸಿದ ತರುವಾಯ, 6,82,550/– ರೂಪಾಯಿಗಳ ಮೊತ್ತದ ಪರಿಹಾರವು ತಕ್ಕಷ್ಟಿಲ್ಲವೆಂಬ ಕಾರಣದಿಂದ ಪರಿಹಾರದ ಹೆಚ್ಚಳಕ್ಕಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು, ಸದಸ್ಯರು, ಹೆಚ್ಚುವರಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಹಿರಿಯೂರು (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ) ಇವರು ಎಂ.ವಿ.ಸಿ ಸಂ.25/2013ರಲ್ಲಿ ನೀಡಿದ ತೀರ್ಪು ಮತ್ತು ಐತೀರ್ಪು ದಿನಾಂಕ 2ನೇ ಆಗಸ್ಟ್ 2014ರ ವಿರುದ್ಧ ಕ್ಲೇಮುದಾರರಿಂದ ಈ ಅಪೀಲನ್ನು ಸಲ್ಲಿಸಿದ್ದಾರೆ.

3. ಕ್ಲೇಮುದಾರರು, ಮೃತ ಈರಣ್ಣನ ಪತ್ನಿ ಮತ್ತು ಇಬ್ಬರು ಅಪ್ರಾಪ್ತ ಮಕ್ಕಳಾಗಿದ್ದರೆ ಹಾಗೂ 3 ಮತ್ತು 4ನೇ ಪ್ರತ್ಯರ್ಜಿದಾರರು, ಮೃತನ ಪೋಷಕರಾಗಿದ್ದಾರೆ. ಮೋಟಾರು ವಾಹನಗಳ ಅಧಿನಿಯಮದ 166ನೇ ಪ್ರಕರಣದ ಅಡಿಯಲ್ಲಿ ಕ್ಲೇಮು ಅರ್ಜಿಯನ್ನು ಕ್ಲೇಮುದಾರರು ದಾಖಲು ಮಾಡಿದ್ದು, ದಿನಾಂಕ 5.12.2012ರಂದು 9.00ರ ಬೆಳಗ್ಗೆ ಜೆ.ಜಿ. ಹಳ್ಳಿ, ಆನೆಸಿಂದ್ರಿ ಗೇಟ್ ಬಳಿ, ಎನ್‌ಎಚ್–4 ರಸ್ತೆ,

ಹಿರಿಯೂರು ತಾಲ್ಲೂಕು ಸಮೀಪದ ತನ್ನ ಗ್ರಾಮದಿಂದ ಹಿಂಬದಿ ಸವಾರನಾಗಿ ನೋಂದಣಿ ಸಂ.ಕೆಎ–06/ಇಬಿ–2018 ಹೊಂದಿದ ಮೋಟಾರು ಸೈಕಲ್‌ನಲ್ಲಿ ಮಿತ ವೇಗದಲ್ಲಿ ಮೃತ ಈರಣ್ಣನು ಚಲಿಸುತ್ತಿದ್ದಾಗ, ಅದೇ ಸಮಯದಲ್ಲಿ ಹಿರಿಯೂರಿನಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ನೋಂದಣಿ ಸಂಖ್ಯೆ ಕೆಎ–05/ಎಂಜಿ–4263 ಹೊಂದಿದ ಕಾರು ಚಾಲಕನ ದುಡುಕಿನ ಮತ್ತು ನಿರ್ಲಕ್ಷ್ಯತೆಯಿಂದ ಮತ್ತು ಅತಿ ವೇಗದಲ್ಲಿ ಈ ಹಿಂದೆ ಹೇಳಿದ ಮೋಟಾರು ಸೈಕಲ್‌ಗೆ ವಿರುದ್ಧವಾಗಿ ಡಿಕ್ಕಿ ಹೊಡೆದಿದ್ದಾನೆಂದು ವಾದಿಸಲಾಗಿದೆ. ಈ ಕಾರಣದಿಂದಾಗಿ, ಮೃತ ಈರಣ್ಣನ ಪ್ರಮುಖ ಅಂಗಗಳಿಗೆ ಗಂಭೀರ ಗಾಯಗಳು ಉಂಟಾಗಿವೆ ಮತ್ತು 108 ಅಂಬುಲೆನ್ಸ್‌ನಲ್ಲಿ ಶಿಫ್ಟ್ ಮಾಡುತ್ತಿರುವಾಗ ಆತನು ಗಾಯಗಳಿಂದಾಗಿ ಮರಣ ಹೊಂದಿದ್ದಾನೆ.

4. ಮೃತನಿಗೆ, ಸುಮಾರು 35 ವರ್ಷಗಳ ವಯಸ್ಸಾಗಿದ್ದು, ಕುರಿ ವ್ಯಾಪಾರ ಮತ್ತು ಕೃಷಿ ಕೆಲಸ ಸಹ ಮಾಡುತ್ತಿದ್ದು, ಕುರಿ ವ್ಯಾಪಾರದಿಂದ ಪ್ರತಿ ತಿಂಗಳು 15,000/– ರೂಪಾಯಿಗಳು ಮತ್ತು ಕೃಷಿಯಿಂದ ವಾರ್ಷಿಕ 2,00,000/– ರೂಪಾಯಿಗಳ ಮೊತ್ತವನ್ನು ಗಳಿಸುತ್ತಿದ್ದನು ಹಾಗೂ ಅಪಘಾತಕ್ಕೆ ಮುಂಚೆ ಗಟ್ಟಿಮುಟ್ಟಾಗಿ ಮತ್ತು ಆರೋಗ್ಯವಾಗಿದ್ದನು ಮತ್ತು ಇಡೀ ಕುಟುಂಬವು ಆತನ ಆದಾಯದ ಮೇಲೆ ಅವಲಂಬಿತವಾಗಿದೆಯೆಂಬುದು ಅಪೀಲುದಾರರ ಪ್ರಕರಣವಾಗಿದೆ. ಆದರೆ, ಅಕಾಲಿಕ ಮತ್ತು ಅಸ್ವಾಭಾವಿಕವಾಗಿ ಮೃತಪಟ್ಟ ಕಾರಣದಿಂದ, ಅಪೀಲುದಾರರಿಗೆ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಬೆಂಬಲವಲ್ಲದೇ, ಪ್ರೀತಿ ಮತ್ತು ವಾತ್ಸಲ್ಯ ಪ್ರೇರಣೆ ಮತ್ತು ಮಾರ್ಗದರ್ಶನವನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ, ಅವರಿಗೆ ಸಮಂಜಸವಾಗಿ ಪರಿಹಾರ ಕೊಡಬೇಕೆಂಬುದು ಅವರ ಮೊಕದ್ದಮೆಯಾಗಿದೆ.

5. ಮೃತನ ಮರಣದ ಕಾರಣದಿಂದ, ನ್ಯಾಯಾಧಿಕರಣದ ಮುಂದೆ ಕ್ಲೇಮು ಅರ್ಜಿಯನ್ನು ದಾಖಲು ಮಾಡಿದ ಅಪೀಲುದಾರರು, ಪ್ರತ್ಯರ್ಜಿದಾರರ ವಿರುದ್ಧ ಪರಿಹಾರ ಕೋರಿದ್ದಾರೆ. ಸದರಿ ಕ್ಲೇಮು ಅರ್ಜಿಯನ್ನು 2ನೇ ಆಗಸ್ಟ್ 2014ರಂದು ನ್ಯಾಯಾಧಿಕರಣದ ಮುಂದೆ ಪರಿಗಣನೆಗಾಗಿ ಕೈಗೆತ್ತಿಕೊಳ್ಳಲಾಗಿದೆ. ನ್ಯಾಯಾಧಿಕರಣವು,

ದಾಖಲೆ ಮೇಲೆ ಲಭ್ಯವಿರುವ ಸುಸಂಬದ್ಧ ಸಾಮಗ್ರಿಯನ್ನು ಪರಿಗಣಿಸಿದ ತರುವಾಯ ಮತ್ತು ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ವಿವೇಚಿಸಿದ ತರುವಾಯ, ಕ್ಲೇಮು ಅರ್ಜಿಯನ್ನು ಭಾಗಶಃ ಅಂಗೀಕರಿಸಿದ್ದು, ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಸಹಾಯಕಾರಿ ನಿರ್ಲಕ್ಷ್ಯತೆಯ ಸಲುವಾಗಿ ತರುವಾಯ ಶೇ.15ರಷ್ಟನ್ನು ಕಡಿತಗೊಳಿಸಿ ಅರ್ಜಿಯ ದಿನಾಂಕದಿಂದ, ಸಂದಾಯದ ದಿನಾಂಕದವರೆಗೆ ವಾರ್ಷಿಕ 6,82,550/- ರೂಪಾಯಿಗಳ ಮೊತ್ತವನ್ನು ನೀಡಿದೆ. ಶೇಕಡಾ 15ರಂತೆ ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ನಿಗದಿಪಡಿಸಿದ ಸಹಾಯಕಾರಿ ನಿರ್ಲಕ್ಷ್ಯತೆಯನ್ನು ಸಹ ನ್ಯಾಯಾಧಿಕರಣದಿಂದ ನೀಡಿದ ಪರಿಹಾರ ಪ್ರಮಾಣದಿಂದ ತೃಪ್ತಿಕರವಾಗದೇ ಇರುವುದರಿಂದ, ಅಪೀಲುದಾರರು, ಈ ನ್ಯಾಯಾಲಯದ ಮುಂದೆ ಅಪೀಲಿನಲ್ಲಿ, ಪರಿಹಾರದ ಹೆಚ್ಚಳಕ್ಕೆ ಕೋರಿದ್ದಾರೆ ಮತ್ತು ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ನಿಗದಿಪಡಿಸಿದ ಸಹಾಯಕಾರಿ ನಿರ್ಲಕ್ಷ್ಯತೆಯನ್ನು ಸಹ ರದ್ದುಗೊಳಿಸುವಂತೆ ಕೋರಿದ್ದಾರೆ.

6. ನಾವು ಅಪೀಲಿನ ಜ್ಞಾಪನಾ ಪತ್ರದಲ್ಲಿ ಒತ್ತಿ ಹೇಳಿದ ಕಾರಣಗಳನ್ನು ಪರಿಶೀಲಿಸಿದ್ದೇವೆ ಮತ್ತು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಹಾಗೂ ಎರಡನೇ ಪ್ರತ್ಯರ್ಜಿದಾರ/ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ಅಹವಾಲನ್ನು ಸುಮಾರು ಸಮಯ ಆಲಿಸಿದ್ದೇವೆ.

7. ಮೃತನಿಗೆ, ಸುಮಾರು 35 ವರ್ಷ ವಯಸ್ಸಾಗಿದ್ದು ಪ್ರತಿತಿಂಗಳು 4,500/- ರೂಪಾಯಿಗಳ ಮತ್ತು ವ್ಯಾಪಾರದಿಂದ ವಾರ್ಷಿಕ 15,000/- ರೂಪಾಯಿಗಳು ಹಾಗೂ ಕೃಷಿಯಿಂದ ವಾರ್ಷಿಕ 2,00,000/- ರೂಪಾಯಿಗಳ ಮೊತ್ತವನ್ನು ಗಳಿಸಿದಂತೆ ಮೃತನ ಆದಾಯವನ್ನು ತೆಗೆದುಕೊಂಡು ಒಟ್ಟಾರೆಯಾಗಿ ನ್ಯಾಯಾಧಿಕರಣ ತಪ್ಪು ಮಾಡಿದೆಯೆಂದು ಕ್ಲೇಮುದಾರರು/ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಆರ್. ಶಶಿಧರ್, ಭಾವಾವೇಷವಾಗಿ ವಾದವನ್ನು ಮಂಡಿಸಿದ್ದಾರೆ. ಅದನ್ನು ನಂಬದೇ ನ್ಯಾಯಾಧಿಕರಣ, ಯಾವುದೇ ಆಧಾರವಿಲ್ಲದೇ ಪ್ರತಿ ತಿಂಗಳು 4,500/- ರೂಪಾಯಿಗಳಂತೆ ಮಾತ್ರ ಮೃತನ ಆದಾಯವನ್ನು ನಿರ್ಧರಿಸಿದೆ. ಇದು, ಮರು ನಿರ್ಧರಣೆಗೆ ಅರ್ಹವಾಗಿದೆಯೆಂದು ನಿವೇದಿಸಿದ್ದಾರೆ.

ಇದಲ್ಲದೇ, ಕ್ಲೇಮುದಾರರು, ಸುಮಾರು 28 ವರ್ಷಗಳ ವಯಸ್ಸಿನ ಪತ್ನಿ ಮತ್ತು ಸುಮಾರು 8 ವರ್ಷಗಳು ಮತ್ತು 6 ವರ್ಷಗಳ ವಯಸ್ಸಿನ ಇಬ್ಬರು ಅಪ್ರಾಪ್ತ ಮಕ್ಕಳಿಗೆ ಬೇರಾರೂ ಅಲ್ಲ ಹಾಗೂ ಎಲ್ಲರು ಮೃತನ ಆದಾಯದ ಮೇಲೆ ಅವಲಂಬಿಸಿದ್ದು, ಆತನು ಕುಟುಂಬದ ಏಕೈಕ ಆಧಾರಸ್ತಂಬವಾಗಿದ್ದನೆಂದು, ಅವರು ವಾದವನ್ನು ಮಂಡಿಸಿದ್ದಾರೆ. 3 ಮತ್ತು 4ನೇ ಪ್ರತ್ಯರ್ಜಿದಾರರು, ಅನುಕ್ರಮವಾಗಿ ವಯಸ್ಸು ಸುಮಾರು 55 ವರ್ಷಗಳು ಮತ್ತು 50 ವರ್ಷಗಳಾಗಿದ್ದು ಮೃತನ ಪೋಷಕರಾಗಿದ್ದಾರೆ ಮತ್ತು ಅವರು ಸಹ, ಮೃತನ ಆದಾಯದ ಮೇಲೆ ಅವಲಂಬಿಸಿದ್ದಾರೆ. ಮೃತನ ಆದಾಯಕ್ಕೆ ಪೂರಕವಾಗಿ, ಕ್ಲೇಮುದಾರರು, ಆರ್‌ಟಿಸಿ ಇತ್ಯಾದಿ ಉದ್ಧೃತ ಭಾಗಗಳನ್ನು ಹಾಜರುಪಡಿಸಿದ್ದಾರೆ. ಆದರೆ ನ್ಯಾಯಾಧಿಕರಣವು, ಆರ್‌ಟಿಸಿಗಳು, ಮೃತನ ತಾಯಿಯ ಹೆಸರಿನಲ್ಲಿ ಇದೆ ಎಂಬ ಏಕೈಕ ಕಾರಣದ ಮೇಲೆ ಅದನ್ನು ನಂಬಿರುವುದಿಲ್ಲ. ಆದರೆ, ಪ್ರತಿ ತಿಂಗಳು 4,500/– ರೂಪಾಯಿಗಳಂತೆ ಮಾತ್ರ ಮೃತನ ಆದಾಯವನ್ನು ನಿರ್ಧರಿಸುವುದಕ್ಕಾಗಿ ಒಳ್ಳೆಯ ಕಾರಣವಿಲ್ಲದೇ ಅದನ್ನು ಸಮರ್ಥಿಸಿಕೊಂಡಿರುವುದು ಸರಿಯಲ್ಲ. ರಸ್ತೆ ಸಂಚಾರ ಅಪಘಾತದಲ್ಲಿ ಮೃತನ ಮರಣದ ಕಾರಣದಿಂದ ಪರಿಹಾರ ನೀಡುವಾಗ ನ್ಯಾಯಾಧಿಕರಣದಿಂದ ಈ ಅಂಶವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ನಿಗದಿಪಡಿಸಿದ ನಿರ್ಲಕ್ಷ್ಯತೆಗೆ ಸಂಬಂಧಪಟ್ಟಂತೆ, ಮೋಟಾರು ಸೈಕಲ್ ಮಾಲೀಕನು, ಅಪಘಾತ ಸಂಭವಿಸಿದ್ದಕ್ಕಾಗಿ ಶೇ.15ರಷ್ಟರ ಮಟ್ಟಿಗೆ ನೀಡಬೇಕೆಂಬ ನಿರ್ಣಯಕ್ಕೆ ನ್ಯಾಯಾಧಿಕರಣ ಬಂದು ಒಟ್ಟಾರೆಯಾಗಿ ತಪ್ಪು ಮಾಡಿದೆಯೆಂದು ಅವರು ಭಾವಾವೇಷವಾಗಿ ವಾದವನ್ನು ಮಂಡಿಸಿದ್ದಾರೆ. ನೀಡಲಾಗಿರುವ ಕಾರಣ ಮತ್ತು ನ್ಯಾಯಾಧಿಕರಣದ ತೀರ್ಪಿನ ಪ್ಯಾರಾಗ್ರಾಫ್ 12ರಲ್ಲಿ ನ್ಯಾಯಾಧಿಕರಣದಿಂದ ದಾಖಲಿಸಲಾದ ಸಂಗತಿಯನ್ನು ನಿರ್ಣಯಿಸಿರುವುದು, ಮೃತನ ಮೇಲೆ ಸಹಾಯಕಾರಿ ನಿರ್ಲಕ್ಷ್ಯತೆಯಿಂದ ಶೇ.15ರಷ್ಟು ನಿಗದಿಪಡಿಸಿರುವುದು ದಾಖಲೆ ಮೇಲಿನ ವಿಷಯಕ್ಕೆ ವಿರುದ್ಧವಾಗಿದೆ. ಆದ್ದರಿಂದ, ಅದು, ರದ್ದುಪಡಿಸುವುದಕ್ಕೆ ಹೊಣೆಯಾಗುತ್ತದೆ ಮತ್ತು ಇಡೀ ನಿರ್ಲಕ್ಷತೆಯನ್ನು ಎರಡನೇ ಪ್ರತ್ಯರ್ಜಿದಾರ/ಅಪರಾಧ ವಾಹನದ ವಿಮಾದಾರನು ವಿಮೆ ಮಾಡಲಾದ ಕಾರು ಚಾಲಕನ ಕಡೆಯಿಂದ ಹೊಣೆಯನ್ನು ನಿಗಡಿಪಡಿಸಬಹುದೆಂದು ನಿವೇದಿಸಿದ್ದಾರೆ.

ತದನಂತರ, ದಿನಾಂಕ 5.12.2012ರಂದು ಸಂಭವಿಸಿದ ಅಪಘಾತಕ್ಕೆ ವಾರ್ಷಿಕ ಶೇ.6 ರಂತೆ ನ್ಯಾಯಾಧಿಕರಣದಿಂದ ನೀಡಿದ ಬಡ್ಡಿಯ ದರವು, ಅತ್ಯಂತ ಕಡಿಮೆಯಿದೆಯೆಂದು ಕ್ಲೇಮುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಭಾವಾವೇಷವಾಗಿ ವಾದವನ್ನು ಮಂಡಿಸಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ನೀಡಲಾದ ಕಾನೂನು ಅನುಪಾತವನ್ನು ಅವಲೋಕಿಸಿ ಮತ್ತು ಈ ನ್ಯಾಯಾಲಯ ವಿವಿಧ ತೀರ್ಮಾನಗಳಲ್ಲಿ ಕನಿಷ್ಠಪಕ್ಷ ಶೇ.9 ರಿಂದ ಶೇ.10ರ ವರೆಗೆ ವಾರ್ಷಿಕ ಬಡ್ಡಿಯನ್ನು ನೀಡಬಹುದಾಗಿದ್ದು, ನ್ಯಾಯೋದ್ದೇಶವನ್ನು ನೆರವೇರಿಸುವುದು ಮತ್ತು ಪ್ರಶ್ನಿತ ತೀರ್ಪು ಹಾಗೂ ಐತೀರ್ಪನ್ನು ಅದಕ್ಕನುಸಾರವಾಗಿ ಮಾರ್ಪಡಿಸಬೇಕೆಂಬುದು ಅವರ ವಾದವಾಗಿದೆ.

ಆದ್ದರಿಂದ, ನ್ಯಾಯಾಧಿಕರಣ ನೀಡಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪು ಯುಕ್ತ ಪರಿಹಾರ ಹೆಚ್ಚಿಸುವುದರ ಮೂಲಕ ಮಾರ್ಪಾಡಿಸುವುದಕ್ಕೆ ಹೊಣೆಯಾಗಿದ್ದು, ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಶೇ.15ರಂತೆ ನಿಗಡಿಪಡಿಸಿದ ಸಹಾಯಕಾರಿ ನಿರ್ಲಕ್ಷ್ಯತೆಯನ್ನು ರದ್ದುಗೊಳಿಸಬೇಕೆಂದು ಮತ್ತು ಬಡ್ಡಿ ದರವನ್ನು ಸಹ ಹೆಚ್ಚಿಸಬೇಕೆಂದು ಅವರು ವಾದವನ್ನು ಮಂಡಿಸಿದ್ದಾರೆ.

8. ಅದಕ್ಕೆ ವಿರುದ್ಧವಾಗಿ, ನ್ಯಾಯಾಧಿಕರಣದಿಂದ ನೀಡಲಾದ ಪರಿಹಾರವನ್ನು ದಾಖಲೆ ಮೇಲೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ವಿವೇಚಿಸಿದ ತರುವಾಯ ಮಾಡಲಾಗಿದೆ ಮತ್ತು ದಾಖಲೆ ಮೇಲೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಯಾವುದೇ ನಂಬಲರ್ಹ ಅನುಪಸ್ಥಿತಿಯಲ್ಲಿ, ನ್ಯಾಯಾಧಿಕರಣವು 4,500/– ರೂ.ಗಳಂತೆ ಮೃತನ ಮಾಸಿಕ ಆದಾಯ ನಿರ್ಧರಿಸಿರುವುದನ್ನು ಸಮರ್ಥನೀಯವೆಂದು ಮತ್ತು ಅವಲಂಬನಾ ನಷ್ಟ ಮತ್ತು ಸಾಂಪ್ರದಾಯಿಕ ಶೀರ್ಷಿಕೆಗಳ ಸಲುವಾಗಿ ಸಹ ನ್ಯಾಯ ಸಮ್ಮತ ಮತ್ತು ಯುಕ್ತ ಪರಿಹಾರ ನೀಡಲಾಗಿದೆಯೆಂದು ಶ್ರೀ ಓ. ಮಹೇಶ್, ಎರಡನೇ ಪ್ರತ್ಯರ್ಜಿದಾರ/ ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಭಾವಾವೇಷವಾಗಿ

ವಾದವನ್ನು ಮಂಡಿಸಿದ್ದಾರೆ. ಹಾಗಾಗಿ, ಅದರಲ್ಲಿ ಹಸ್ತಕ್ಷೇಪ ಮಾಡುವುದು, ಅನಗತ್ಯವಾಗಿದೆಯೆಂದು ನಿವೇದಿಸಿದ್ದಾರೆ. ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಶೇ.15ರಂತೆ ನಿಗದಿಪಡಿಸಿದ ಸಹಾಯಕಾರಿ ನಿರ್ಲಕ್ಷ್ಯತೆಗೆ ಸಂಬಂಧಪಟ್ಟಂತೆ, ಕ್ಲೇಮುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ವಾದವನ್ನು ಅಂಗೀಕರಿಸಲಾಗದು ಮತ್ತು ಅದರ ತೀರ್ಪಿನ ಪ್ಯಾರಾ 12ರಲ್ಲಿ ನ್ಯಾಯಾಧಿಕರಣದಿಂದ ನೀಡಲಾದ ಕಾರಣ, ನ್ಯಾಯ ಸಮ್ಮತ ಮತ್ತು ಯುಕ್ತವಾಗಿದೆ ಅದರಲ್ಲಿ ಹಸ್ತಕ್ಷೇಪ ಮಾಡಬಾರದೆಂದು ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಭಾವಾವೇಷವಾಗಿ ವಾದವನ್ನು ಮಂಡಿಸಿದ್ದಾರೆ. ಆತನು, ಪ್ರಾ.ಸಾ.2 ಸಾಕ್ಷ್ಯಕ್ಕೆ ಅವರ ನಿರ್ದಿಷ್ಟ ಗಮನವನ್ನು ಸೆಳೆದಿದ್ದು, ಮೂವರು ವ್ಯಕ್ತಿಗಳು, ಪ್ರಶ್ನಿಸಿದ ಮೋಟಾರು ಸೈಕಲ್ ಮೇಲೆ ಹೋಗುತ್ತಿದ್ದರು ಮತ್ತು ಮೋಟಾರು ಸೈಕಲ್ ಮೂವರು ವ್ಯಕ್ತಿಗಳನ್ನು ಸಾಗಿಸುತ್ತಿರುವುದನ್ನು ನಿರೀಕ್ಷಿಸಲಾಗದು, ಆದ್ದರಿಂದ, ಪ್ಯಾರಾ 13ರಲ್ಲಿ ಸರಿಯಾಗಿಯೇ ಅಭಿಪ್ರಾಯಪಟ್ಟಿರುವಂತೆ ಮೋಟಾರು ಸೈಕಲ್ ಮಾಲೀಕನು ಐತೀರ್ಪು ಮೊತ್ತದ ಸ್ವಲ್ಪ ಶೇಕಡಾ ವಾರನ್ನು ಪಾವತಿಸುವುದಕ್ಕೆ ಸಹ ಹೊಣೆಯಾಗುತ್ತಾನೆಂದು ಹೇಳಿದ್ದಾರೆ. ಆದ್ದರಿಂದ ಆತನು ಶೇ.15ರಂತೆ ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಸಹಾಯಕಾರಿ ನಿರ್ಲಕ್ಷ್ಯತೆ ನಿಗದಿಪಡಿಸಿದ್ದಕ್ಕಾಗಿ ನ್ಯಾಯಾಧಿಕರಣವು ದಾಖಲಿಸಿದ ಸಂಗತಿಯನ್ನು ನಿರ್ಣಯಿಸಿರುವುದರಲ್ಲಿ ಹಸ್ತಕ್ಷೇಪ ಮಾಡುವುದು, ಅನಾವಶ್ಯಕವಾಗಿದೆಯೆಂದು ವಾದವನ್ನು ಮಂಡಿಸಿದ್ದಾರೆ.

9. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ತರುವಾಯ, ನಮ್ಮ ಮುಂದೆ ಮಂಡಿಸಲಾದ ಮೂಲ ದಾಖಲೆಗಳು ಸೇರಿದಂತೆ ನ್ಯಾಯಾಧಿಕರಣದಿಂದ ಮಾಡಿದ ತೀರ್ಪು ಮತ್ತು ಐತೀರ್ಪನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ತರುವಾಯ, ಈ ಅಪೀಲಿನಲ್ಲಿ ನಮ್ಮ ಪರಿಗಣನೆಗಾಗಿ ಉದ್ಭವಿಸುವ ಅಂಶಗಳೆಂದರೆ,

*1] ನ್ಯಾಯಾಧಿಕರಣ, ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಶೇ.15ರಂತೆ ಸಹಾಯಕಾರಿ ನಿರ್ಲಕ್ಷ್ಯತೆ ನಿಗದಿಪಡಿಸುರುವುದು ಸಮರ್ಥನೀಯವಾಗಿದೆಯೇ?*

*2] ನ್ಯಾಯಾಧಿಕರಣ ನೀಡಿದ ಪರಿಹಾರದ ಪ್ರಮಾಣವು, ನ್ಯಾಯಸಮ್ಮತ ಮತ್ತು ಯುಕ್ತವಾಗಿದೆಯೇ?*

**ಮರುಪರಿಶೀಲನಾಂಶ 1]**: ದಿನಾಂಕ 05.12.2012ರಂದು ಸುಮಾರು ಬೆಳಿಗ್ಗೆ 9.00ರಲ್ಲಿ ಅಪಘಾತ ಸಂಭವಿಸಿದೆ ಮತ್ತು ರಸ್ತೆ ಸಂಚಾರ ಅಪಘಾತದಲ್ಲಿ ಮೃತ ಈರಣ್ಣನ ಪರಿಣಾಮ ರೂಪಿಯಾದ ಮರಣವು, ವಿವಾದವಾಗಲಾರದು. ಮೃತ ಹಿಂಬದಿ ಸವಾರ ಮತ್ತು ನೋಂದಣಿ ಸಂ.ಕೆಎ–05/ಎಂಜಿ–4263, ಅದರಲ್ಲಿ ಸಂ.ಕೆಎ–06/ಇವಿ–2018 ಹೊಂದಿದ ಮೋಟಾರು ಸೈಕಲ್ ಅಪಘಾತದಲ್ಲಿ ಎರಡೂ ವಾಹನಗಳು ಒಳಗೊಂಡಿವೆ ಎಂಬುದು ಸಹ ವಿವಾದವಾಗುವುದಿಲ್ಲ.

ಪ್ರಾ.ಸಾ.1, 1ನೇ ಅಪೀಲುದಾರನು, ನೋಂದಣಿ ಸಂ.ಕೆಎ–05/ಎಂಜಿ–4263 ಹೊಂದಿದ ಕಾರಿನ ನಿರ್ಲಕ್ಷ್ಯತೆಯ ಕಾರಣದಿಂದ ಅಪಘಾತ ಸಂಭವಿಸಿದೆಯೆಂದು ಹೇಳಿಕೆ ನೀಡಿದ್ದಾನೆ. ಹೆಚ್ಚಿನ ಅವಧಿಯಲ್ಲಿ ವಿಮಾದಾರನನ್ನು ಪ್ರಾ.ಸಾ.1 ಆಗಿ ಪಾಟೀ ಸವಾಲು ಮಾಡಲಾಗಿದೆ. ಕ್ಲೇಮುದಾರರು ತಮ್ಮ ಪ್ರಕರಣಕ್ಕೆ ಪೂರಕವಾಗಿ ಮೋಟಾರು ಸೈಕಲನ್ನು ಚಾಲನೆ ಮಾಡುತ್ತಿದ್ದ ಪ್ರಾ.ಸಾ.2 ಆದ ಪ್ರತ್ಯಕ್ಷದರ್ಶಿಗಳಲ್ಲಿ ಒಬ್ಬರನ್ನು ಪರೀಕ್ಷಿಸಲಾಗಿದೆ. ದುಡುಕಿನ ಮತ್ತು ನಿರ್ಲಕ್ಷ್ಯತೆಯ ರೀತಿಯಲ್ಲಿ ಹಾಗೂ ಅವರ ಮೋಟಾರು ಸೈಕಲ್ ಹಿರಿಯೂರು ಕಡೆಯಿಂದ ಬರುತ್ತಿದ್ದ ನೋಂದಣಿ ಸಂಖ್ಯೆ ಕೆಎ–05/ಎಂಜಿ–4263, ಹೊಂದಿದ ಕಾರು, ಮೃತ ಈರಣ್ಣ ಮತ್ತು ಅದೇ ಸಮಯದಲ್ಲಿ ಕೊಲ್ಲತ್ತದಹಟ್ಟಿಗೆ ಹೋಗುತ್ತಿದ್ದ ಜೆ.ಜಿ.ಹಳ್ಳಿಯಲ್ಲಿನ 'ಯು' ಟರ್ನ್‌ನಲ್ಲಿ ಆತನು, ಎನ್‌ಎಚ್–4 ರಸ್ತೆಯನ್ನು ಕ್ರಾಸ್ ಮಾಡಿಕೊಳ್ಳುವಾಗ ದಿನಾಂಕ 5.12.2012 ಸುಮಾರು 9.30ರಲ್ಲಿ ಅಪಘಾತವಾಗಿದ್ದು, ಆ ಕಾರಣದಿಂದ ಆತನಿಗೆ ಗಾಯ ಉಂಟಾಗಿವೆ ಮತ್ತು ಹಿಂಬದಿ ಸವಾರ ಅಂದರೆ ಈರಣ್ಣನ ತಂದೆ ಚಿಕ್ಕಣ್ಣ, ಪ್ರಶ್ನಿಸಿದ ಮೃತನಿಗೆ ಸಹ ತೀವ್ರತರವಾದ ಗಾಯಗಳು ಉಂಟಾಗಿವೆಯೆಂದು

ಪ್ರಾ.ಸಾ.2 ಹೇಳಿಕೆ ನೀಡಿದ್ದಾನೆ. ಕೂಡಲೇ ಆತನನ್ನು ಸರ್ಕಾರಿ ಆಸ್ಪತ್ರೆ ಹಿರಿಯೂರಿಗೆ ಅಂಬುಲೆನ್ಸ್ ಮೂಲಕ ತೆಗೆದುಕೊಂಡು ಹೋಗಿದ್ದು, ಆದರೆ, ಆತನನ್ನು ಆಸ್ಪತ್ರೆಗೆ ಸಾಗಿಸುವಾಗ ಮೃತನಾಗಿರುತ್ತಾನೆ. ಪ್ರಾ.ಸಾ.2, ವಿಮಾದಾರನನ್ನು ಸಹ ಪರಿಗಣಿಸಿದ ಸಮಯದಲ್ಲಿ ಪಾಟೀ ಸವಾಲು ಮಾಡಲಾಗಿದೆ. ಸ್ವತಃ ದಾಸಪ್ಪ ಮತ್ತು ಮೃತ ಈರಣ್ಣ ಪ್ರಶ್ನಿಸಿದ ಮೋಟಾರು ಸೈಕಲ್ ಮೇಲೆ ಹೋಗುತ್ತಿದ್ದೆವು ಎಂಬುದನ್ನು ಪ್ರಾ.ಸಾ.2 ಸರಿಯಾಗಿಯೇ ಒಪ್ಪಿದ್ದಾನೆ. ಒಟ್ಟಾರೆ ಅದರ ಅರ್ಥವೇನೆಂದರೆ, ಸದರಿ ಮೂವರು ವ್ಯಕ್ತಿಗಳು, ಮೋಟಾರು ಸೈಕಲ್ ಮೇಲೆ ಹೋಗುತ್ತಿದ್ದರು. ಹಾಗಾಗಿ, ಮೂವರು, ಸದರಿ ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಸಹ ಒಟ್ಟಾರೆ ನಿರ್ಲಕ್ಷತೆಯಾಗಿದೆ ಮತ್ತು ಮೂವರು ವ್ಯಕ್ತಿಗಳು ಸಾಗುತ್ತಿದ್ದ ನಿರ್ಲಕ್ಷ್ಯತೆಯ ಕಾರ್ಯದ ಕಾರಣದಿಂದ, ಅಪಘಾತ ಸಂಭವಿಸಿದೆಯೆಂದು ವಿಮಾದಾರನು ವಾದಿಸಿದ್ದಾನೆ. ಪಾಟೀ ಸವಾಲಿನ ಸಮಯದ ಅವಧಿಯಲ್ಲಿ ಪ್ರಾ.ಸಾ.2 'ಯು'ಟರ್ನ್‌ನಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳ ನಡುವೆ, ಕವಲುದಾರಿಯಲ್ಲಿ ಅಂದರೆ, ರಸ್ತೆಯ ಮಧ್ಯದಲ್ಲಿ ಈ ಅಪಘಾತವು ಸಂಭವಿಸಿದೆಯೆಂದು ಹೇಳಿದ್ದಾನೆ. ಎರಡು ಕಡೆಗಳಿಂದ ಓಡಾಡುತ್ತಿರುವ ವಾಹನವನ್ನು ಗಮನಿಸದೇ 'ಯು'ಟರ್ನ್‌ನಲ್ಲಿ ಪ್ರಾ.ಸಾ.2 ತನ್ನ ಮೋಟಾರನ್ನು ತೆಗೆದುಕೊಂಡಿದ್ದಾನೆ ಮತ್ತು ಮೃತ ಈರಣ್ಣನು, ಚಾಲನಾ ಪರವಾಗಿ ಇಲ್ಲದೇ ವಾಹನವನ್ನು ಚಾಲನೆ ಮಾಡುತ್ತಿದ್ದನು ಹಾಗೂ ತಪ್ಪು ಪ್ರಕರಣವನ್ನು ಪ್ರಾ.ಸಾ.2 ವಿರುದ್ಧ ನಿಗದಿಪಡಿಸಲಾಗಿದೆಯೆಂದು ವಿಮಾದಾರನು ವಾದಿಸಿದ್ದಾನೆ.

10. ತದನಂತರ, ಪ್ರಾ.ಸಾ.2 ಸಾಕ್ಷ್ಯವನ್ನು, ಆರೋಪಪಟ್ಟಿ ಮೂಲಕ ರುಜುವಾತು ಮಾಡಲಾಗಿದ್ದು, ಅದರ ಪ್ರಕಾರ, ಮೃತ ಈರಣ್ಣ ತಂದೆ ಚಿಕ್ಕಣ್ಣ, ಪ್ರಾ.ಸಾ.2 ಮತ್ತು ದಾಸಣ್ಣ ಮೋಟಾರು ಸೈಕಲ್ ಮೇಲೆ ಹೋಗುತ್ತಿದ್ದರು ಹಾಗೂ ಅದೇ ಸಮಯದಲ್ಲಿ, 'ಯು'ಟರ್ನ್‌ನಲ್ಲಿ ಅಪಘಾತ ಸಂಭವಿಸಿದೆ ಹಾಗೂ ಮೋಟಾರು ಸೈಕಲ್‌ನಲ್ಲಿ, ಮೂವರು ವ್ಯಕ್ತಿಗಳು ಸಾಗುತ್ತಿದ್ದರು ಎಂಬುದನ್ನು ನಿರೀಕ್ಷಿಸಿರುವುದಿಲ್ಲವೆಂಬುದು ಆರೋಪ ಪಟ್ಟಿಯಿಂದ ಸ್ಪಷ್ಟವಾಗಿದೆ. ಮೂವರು ವ್ಯಕ್ತಿಗಳು, ಅಪಘಾತಕ್ಕೆ ಮುಂಚೆ ಸದರಿ ಮೋಟಾರು ಸೈಕಲ್ ಮೇಲೆ ಹೋಗುತ್ತಿದ್ದೆವು ಎಂಬುದನ್ನು ಪ್ರಾ.ಸಾ.2 ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾನೆ. ಆದ್ದರಿಂದ, ಪ್ರಾ.ಸಾ.2 ಕಡೆಯಿಂದ ಸಹ ಕೆಲವೊಂದು ಸಹಾಯಕಕಾರಿ ನಿರ್ಲಕ್ಷ್ಯತೆಯಾಗಿದೆ ಮತ್ತು

ಮೋಟಾರು ಸೈಕಲ್ ಮಾಲೀಕನು, ಅದರ ಮಾಲೀಕನಾಗಿರುವುದರಿಂದ, ಐತೀರ್ಪು ಮೊತ್ತದ ಸ್ವಲ್ಪ ಶೇಕಡಾವಾರನ್ನು ಪಾವತಿಸುವುದಕ್ಕೆ ಹೊಣೆಯಾಗಿದ್ದು, ಪರಿಣಾಮವಾಗಿ ತನ್ನ ಮೋಟಾರು ಸೈಕಲ್‌ನ್ನು ಬಾಡಿಗೆಗೆ ನೀಡಿದ್ದಾನೆಂಬ ನಿರ್ಣಯಕ್ಕೆ ಬರಲಾಗಿದೆಯೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟಿದೆ. 1ನೇ ಪ್ರತ್ಯರ್ಜಿದಾರನಾದ ಅದೇ ತನಿಖಾಧಿಕಾರಿಯನ್ನು, ವಿಮಾದಾರನನ್ನು ಸಹ ಪಾಟೀ ಸವಾಲು ಮಾಡಲಾಗಿದೆ ಮತ್ತು ಅದೇ ಮೋಟಾರು ಸೈಕಲ್‌ನ್ನು ಮೃತ ಈರಣ್ಣನ ತಂದೆ ಚಿಕ್ಕಣ್ಣನು ಓಡಿಸುತ್ತಿದ್ದನೆಂದು ವಿಮಾದಾರನು ನಿರ್ದಿಷ್ಟವಾಗಿ ವಾದಿಸಿದ್ದಾನೆ. ಇದಕ್ಕೆ ಸಂಬಂಧಪಟ್ಟಂತೆ ಅದು, ಈ ಮುಂದಿನಂತೆ ನಿಶಾನೆ 1ನೇ ಪ್ರತ್ಯರ್ಜಿದಾರನ ಅಂಶಗಳನ್ನು ಉದ್ಧರಿಸುವುದು ಯೋಗ್ಯವಾಗಿದೆ.

> ". . . . . . . . ನನ್ನ ಮಗ ಜೆ.ಜಿ. ಹಳ್ಳಿಯಲ್ಲಿ ನನ್ನ ಸ್ನೇಹಿತರು ಬಂದಿರುತ್ತಾರೆ. ಅವರನ್ನು ನಮ್ಮ ಗ್ರಾಮಕ್ಕೆ ಕರೆದುಕೊಂಡು ಬರಬೇಕೆಂದು ಕೆಎ–06–ಇಬಿ–2018ನೇ ಮೋಟಾರು ಸೈಕಲ್‌ನಲ್ಲಿ ಜೆ.ಜಿ. ಹಳ್ಳಿಗೆ ಬಂದು ಸ್ನೇಹಿತರನ್ನು ಕರೆದುಕೊಂಡು ಮೋಟಾರ್ ಸೈಕಲ್‌ನಲ್ಲಿ 3 ಜನರು ಕುಳಿತು ತನ್ನ ಗ್ರಾಮಕ್ಕೆ ಬರಲು ಜೆ.ಜಿ. ಹಳ್ಳಿಯಿಂದ ಸರ್ವೀಸ್ ರಸ್ತೆಯಲ್ಲಿ ಬಂದು ಜಾನಕಿಡಾಬಾ ಹೋಟೆಲ್ ಎನ್ ಹೆಚ್ ರಸ್ತೆ ದಾಟುತ್ತಿರುವಾಗ . . . . . . . . .
>
> ನಿಶಾನೆ. 2ನೇ ಪ್ರತ್ಯರ್ಜಿದಾರ ಸಣ್ಣ ಈರಪ್ಪ ಈ ಕೆಳಗಿನಂತೆ ಹೇಳಿಕೆ ನೀಡಿದ್ದಾನೆ:
>
> " . . . . . . . . . ಈ ದಿನ ಬೆಳಿಗ್ಗೆ ನನ್ನ ಮಗ ಕೆಎ–06–ಇಬಿ–2018ನೇ ಮೋಟಾರು ಸೈಕಲ್‌ನಲ್ಲಿ ಜೆ.ಜಿ. ಹಳ್ಳಿ ಗ್ರಾಮಕ್ಕೆ ಹೋಗಿದ್ದು ಜೆ.ಜಿ.ಹಳ್ಳಿ ಗ್ರಾಮದಲ್ಲಿ ಮೇಲ್ಕಂಡ ಮೋಟಾರ್ ಸೈಕಲ್‌ನಲ್ಲಿ ತನ್ನ ಸ್ನೇಹಿತರಾದ ದಾಸಪ್ಪ ಮತ್ತು ಈರಣ್ಣ ಎಂಬುವವರನ್ನು ಕೂರಿಸಿಕೊಂಡು ತನ್ನ ಗ್ರಾಮಕ್ಕೆ ಬರಲು

ಎನ್‌ಹೆಚ್–4 ಸರ್ವೀಸ್ ರಸ್ತೆಯಲ್ಲಿ ಬಂದು ಜಾನಕಿಡಾಬಾ ಹೋಟೆಲ್ ಮುಂಭಾಗ ಬೆಳಿಗ್ಗೆ 9.15ಗಂಟೆ ಸಮಯದಲ್ಲಿ ಎನ್–ಹೆಚ್4 ರಸ್ತೆ ದಾಟುತ್ತಿರುವಾಗ . . . . . . . . .

(ಒತ್ತು ನೀಡಲಾಗಿದೆ)

11. ದಸ್ತಾವೇಜು ಸಾಕ್ಷ್ಯದೊಂದಿಗೆ ಮೇಲೆ ಹೇಳಿದ ಅದರಲ್ಲೂ ಸಿ.ಆರ್.2 ರಲ್ಲಿನ ಸಣ್ಣೀರಪ್ಪನ ಸಾಕ್ಷ್ಯವನ್ನು ವಿವೇಚಿಸಿದ ತರುವಾಯ, ಮೃತ ಈರಣ್ಣ ತಂದೆ ಚಿಕ್ಕಣ್ಣ, ಅಪಘಾತದ ಸಮಯದಲ್ಲಿ ಮೋಟಾರು ಸೈಕಲ್‌ನ್ನು ಚಾಲನೆ ಮಾಡುತ್ತಿದ್ದನೆಂಬುದನ್ನು ಸ್ಪಷ್ಟವಾಗಿ ನಿರಾಕರಿಸಲಾಗಿದೆ, ಅಪಘಾತದ ಸಮಯದಲ್ಲಿ, ಮೃತ ಈರಣ್ಣ ಮೋಟಾರು ಸೈಕಲ್‌ನ್ನು ಸ್ವತಃ ಓಡಿಸುತ್ತಿದ್ದವೆಂಬುದನ್ನು ನಿ.ಆರ್.1 ಮತ್ತು ನಿ.ಆರ್.2 ಇವು ನಿರ್ದಿಷ್ಟವಾಗಿ ಬಹಿರಂಗಪಡಿಸಿಲ್ಲವೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟಿದೆ. ದೂರನ್ನು ವಿಳಂಬವಾಗಿ ದಾಖಲಿಸಿರುವುದಿಲ್ಲ ಮತ್ತು ತನಿಖೆಯನ್ನು, ಅಪಘಾತದ ತರುವಾಯ ಕೂಡಲೇ ಪ್ರಾರಂಭಿಸಲಾಗಿದೆ. ಆದಾಗ್ಯೂ, ಇತರೇ ವ್ಯಕ್ತಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆಂದು ಅನುಮಾನಿಸುವುದಕ್ಕೆ ಯಾವುದೇ ಸಾಕ್ಷ್ಯವಿರುವುದಿಲ್ಲ. ಆದ್ದರಿಂದ, ತನಿಖಾಧಿಕಾರಿಯು, ಆ ವಿಷಯವನ್ನು ಸೂಕ್ತವಾಗಿ ತನಿಖೆ ಮಾಡಿದ್ದಾರೆ ಮತ್ತು ಕಾರು ಚಾಲಕನ ವಿರುದ್ಧ ಆರೋಪ ಪಟ್ಟಿಯನ್ನು ದಾಖಲು ಮಾಡಲಾಗಿದೆಯೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟಿದೆ. ಈ ತನಿಖೆಯನ್ನು ಪ್ರಶ್ನಿಸಲಾಗಿರುವುದಿಲ್ಲ ಮತ್ತು ತಮ್ಮ ಪ್ರತಿವಾದ ರುಜುವಾತು ಪಡಿಸಲು ವಿಮಾ ಕಂಪನಿಯು ಸ್ವತಂತ್ರ ತನಿಖೆಯನ್ನು ನಡೆಸಿರುವುದಿಲ್ಲ. ಆದ್ದರಿಂದ, ಮೋಟರು ಸೈಕಲ್ ಮಾಲೀಕನು, ಐತೀರ್ಪು ಮೊತ್ತದ ಶೇ.15ರಷ್ಟು ಪಾವತಿಸುವುದಕ್ಕೆ ಹೊಣೆಗಾರನಾಗಿರುತ್ತಾನೆಂಬ ನಿರ್ಣಯಕ್ಕೆ ನ್ಯಾಯಾಧಿಕರಣವು ಬಂದಿದೆ. ನಾಯಾಧಿಕರಣವು ತನ್ನ ತೀರ್ಪಿನ 10, 11 ಮತ್ತು 13ನೇ ಪ್ಯಾರಾಗಳಲ್ಲಿ ದಾಖಲಿಸಿದ ಸಂಗತಿಯ ಸದರಿ ನಿರ್ಣಯವು, ನ್ಯಾಯ ಸಮ್ಮತವಾಗಿದೆ ಮತ್ತು ಯುಕ್ತವಾಗಿದೆ ಹಾಗೂ ಅದರಲ್ಲಿ, ಹಸ್ತಕ್ಷೇಪ ಮಾಡಲಾಗದು ಮತ್ತು ಶೇ.15ರಂತೆ ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ನಿಗದಿಪಡಿಸಿದ ಸಹಾಯಕಾರಿ ನಿರ್ಲಕ್ಷ್ಯತೆಯನ್ನು ನಾವು ಎತ್ತಿಹಿಡಿದಿದ್ದೇವೆ. ಅದಕ್ಕನುಸಾರವಾಗಿ, 1ನೇ ಅಂಶಕ್ಕೆ ನಾವು ಸಕಾರಾತ್ಮಕವಾಗಿ ಉತ್ತರಿಸಿದ್ದೇವೆ.

**ಮರುಪರಿಶೀಲನಾಂಶ 2]**: ಈ ಪ್ರಕರಣದಲ್ಲಿ ಅಪಘಾತ ಸಂಭವಿಸಿರುವುದು ಮತ್ತು ಅದರ ಪರಿಣಾಮದಿಂದ ಮೃತನು ಮರಣ ಹೊಂದಿರುವ ಸಂಗತಿಗಳು ವಿವಾದಿತವಲ್ಲ. ಮೃತನ ವಯಸ್ಸು ಸುಮಾರು 35 ವರ್ಷಗಳಾಗಿತ್ತು ಮತ್ತು ಕುರಿ ವ್ಯಾಪರದಿಂದ ಪ್ರತಿ ತಿಂಗಳು 15,000/– ರೂಪಾಯಿಗಳು ಹಾಗೂ ಅವನ ಸ್ವಂತ ಕೃಷಿ ಭೂಮಿಯಿಂದ ವಾರ್ಷಿಕ 2,00,000/– ರೂಪಾಯಿಗಳನ್ನು ಗಳಿಸುತ್ತಿದ್ದನೆಂದು ಹೇಳಲಾಗಿದೆ. ಆದರೆ, ಅದನ್ನು ರುಜುವಾತುಪಡಿಸಲು ಅಪೀಲುದಾರರು ಮೃತನ ತಾಯಿಯ ಹೆಸರಿನಲ್ಲಿರುವ ಆರ್.ಟಿ.ಸಿ. ಎಕ್ಸ್‌ಟ್ರಾಕ್ಟ್‌ಗಳನ್ನು ಹೊರತುಪಡಿಸಿ ಯಾವುದೇ ನಂಬಲರ್ಹ ದಸ್ತಾವೇಜು ಸಾಕ್ಷ್ಯ ಹಾಜರುಪಡಿಸಿರುವುದಿಲ್ಲ. ಆದರೆ, ಪ್ರತಿ ತಿಂಗಳು 4,500/– ರೂಪಾಯಿಗಳಂತೆ ಮಾತ್ರ ಮೃತನ ಆದಾಯ ನಿರ್ಧರಿಸಿರುವುದು ನ್ಯಾಯಸಮ್ಮತವಲ್ಲವೆಂದು ನ್ಯಾಯಾಧಿಕರಣ ಅಭಿಪ್ರಾಯಪಟ್ಟಿರುವುದನ್ನು ನೋಡಬಹುದಾಗಿದೆ. ಅದು, ಅತ್ಯಂತ ಕಡಿಮೆಯಿದೆ ಮತ್ತು ಅದನ್ನು ಮರು ನಿರ್ಧರಣೆ ಮಾಡುವ ಅಗತ್ಯವಿದೆ. ಅಪಘಾತ, 2012ನೇ ವರ್ಷದಲ್ಲಿ ನಡೆದಿದೆ ಮತ್ತು ಮೃತನು ಯುವಕ ಮತ್ತು ಶಕ್ತಿಯುತ ಮನುಷ್ಯನಾಗಿದ್ದು ವಯಸ್ಸು ಸುಮಾರು 35 ವರ್ಷಗಳಾಗಿತ್ತು ಹಾಗೂ ಕುರಿ ವ್ಯಾಪಾರ ಮತ್ತು ಕೃಷಿಯನ್ನು ಸಹ ಮಾಡುತ್ತಿದ್ದು, ತನ್ನ ಪತ್ನಿ, ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳು ಮತ್ತು ಪೊಷಕರನ್ನೊಳಗೊಂಡು, ಕುಟುಂಬ ನಿರ್ವಹಣೆ ಮಾಡುತ್ತಿದ್ದನು. ಆದ್ದರಿಂದ, ವಯಸ್ಸು, ವೃತ್ತಿಗಳಿಗೆ ಸಂಬಂಧಪಟ್ಟಂತೆ ಮತ್ತು ಅಪಘಾತ ವರ್ಷ ಸೇರಿದಂತೆ ಪ್ರತಿ ತಿಂಗಳು 6,500/–ರೂಪಾಯಿಗಳಂತೆ ಮೃತನ ಆದಾಯವನ್ನು ನಾವು ಪುನರ್ ನಿರ್ಧರಿಸಿದ್ದೇವೆ. ಇದಲ್ಲದೇ, ಕ್ಲೇಮುದಾರರಾಗಿ ಪತ್ನಿಯನ್ನು ಹೊರತುಪಡಿಸಿ ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳು (ಇದರಲ್ಲಿ ಅಪೀಲುದಾರರು) ಮತ್ತು ಮೃತನ ಪೋಷಕರು (3 ಮತ್ತು 4ನೇ ಪ್ರತ್ಯರ್ಜಿದಾರರು), ಒಟ್ಟಾರೆಯಾಗಿ ಐದು ಸದಸ್ಯರಿದ್ದಾರೆ. ಮೃತನ ವೈಯಕ್ತಿಕ ವೆಚ್ಚಗಳ ಸಲುವಾಗಿ ನಾವು 1/4ನೇ ಭಾಗವನ್ನು ಕಡಿತಗೊಳಿಸಿದ್ದೇವೆ. ಅದಕ್ಕನುಸಾರವಾಗಿ, 1/4 ಯಿದ್ದಲ್ಲಿ, (ಅಂದರೆ 1,625/– ರೂಪಾಯಿಗಳು), ತನ್ನ ವೈಯಕ್ತಿಕ ವೆಚ್ಚಗಳ ಸಲುವಾಗಿ 6,500/– ರೂಪಾಯಿಗಳಿಂದ ಕಡಿತಗೊಳಿಸಲಾಗಿದ್ದು, ನಿವ್ವಳ ಆದಾಯ, ಪ್ರತಿ ತಿಂಗಳು 4,875/– ರೂಪಾಯಿಗಳಾಗುತ್ತದೆ. ಇದಲ್ಲದೇ, ಮೃತನ ವಯಸ್ಸು, ಅಪಘಾತ ದಿನಾಂಕದಲ್ಲಿದ್ದಂತೆ 35 ವರ್ಷಗಳಾಗಿದೆ. ಆದ್ದರಿಂದ, ಸದರಿ ವಯಸ್ಸಿಗಾಗಿ,

ಅನ್ವಯಿಸುವ ಯುಕ್ತ ಗುಣಕ, ಮಾನ್ಯ ಸರ್ವೋಚ್ಚ ನ್ಯಾಯಾಲಯ ***ಸರಳ ವರ್ಮಾ ಪ್ರಕರಣ*** [1], ತೀರ್ಮಾನದ ಪ್ರಕಾರ '16'ನ್ನು ನ್ಯಾಯಾಧಿಕರಣದಿಂದ ಸರಿಯಾಗಿಯೇ ಅಳವಡಿಸಿಕೊಳ್ಳಲಾಗಿದೆ, ಹೀಗಾಗಿ, ಅವಲಂಬನಾ ನಷ್ಟದ ಸಲುವಾಗಿ ಪರಿಹಾರವನ್ನು (ಅಂದರೆ, 4,875/– ರೂಪಾಯಿಗಳು x 12 x '16') ನ್ಯಾಯಾಧಿಕರಣ ನೀಡಿದ 6,48,000/– ರೂಪಾಯಿಗಳಿಗೆ ಬದಲಾಗಿ 9,36,000/– ರೂಪಾಯಿಗಳನ್ನು ನೀಡಲಾಗಿದೆ.

12. ಇದಲ್ಲದೇ, ನ್ಯಾಯಾಧಿಕರಣವು, ಸಾಂಪ್ರದಾಯಕ ಶೀರ್ಷಿಕೆಗಳ ಸಲುವಾಗಿ ಯುಕ್ತ ಪರಿಹಾರ ನೀಡದೇ ತಪ್ಪು ಮಾಡಿದೆ. ಕ್ಲೇಮುದಾರರು, ಅಪಘಾತದ ದಿನಾಂಕದಂತೆ ಮೃತನ ಪತ್ನಿಗೆ, ವಯಸ್ಸು ಸುಮಾರು 28 ವರ್ಷಗಳು, ಎಂಟು ವರ್ಷಗಳು ಮತ್ತು ಆರು ವರ್ಷಗಳ ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳು ಮತ್ತು ಪೋಷಕರ ವಯಸ್ಸು ಸುಮಾರು 55 ವರ್ಷಗಳು ಮತ್ತು 50 ವರ್ಷಗಳಾಗಿವೆ ಮತ್ತು ಪತ್ನಿಯು, ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಒಬ್ಬಳೇ ಸಾಕಬೇಕಾಗಿದೆ. ಮೃತನ ಮರಣ ಆಕಸ್ಮಿಕ ಮತ್ತು ಅಸ್ವಾಭಾವಿಕವಾಗಿದ್ದು, ಪತ್ನಿಯು, ತನ್ನ ಜೀವನ ಸಂಗಾತಿಯನ್ನು ಕಳೆದುಕೊಂಡಿದ್ದಾಳೆ. ಮಕ್ಕಳು ಪ್ರೀತಿ ಮತ್ತು ವಾತ್ಸಲ್ಯ, ಪ್ರೇರಣೆ ಮತ್ತು ವಿಶೇಷ ಮಾರ್ಗದರ್ಶನ ಮತ್ತು ಪೋಷಕರು ಜೀವನದಲ್ಲಿ ಭದ್ರತೆಯನ್ನು ಕಳೆದುಕೊಂಡಿದ್ದಾರೆ ಹಾಗೂ ತಮ್ಮ ಮಗನ ಭವಿಷ್ಯವನ್ನು ನೋಡುವುದನ್ನು ಕಸಿದುಕೊಳ್ಳಲಾಗಿದೆ. ಮೃತನ ಮರಣವು, ಕೌಟುಂಬಿಕವಾಗಿ, ಸಾಮಾಜಿಕವಾಗಿ, ನೈತಿಕವಾಗಿ ಮತ್ತು ಆರ್ಥಿಕವಾಗಿ ಬಾಧಿತವಾಗಿದೆ. ಆದ್ದರಿಂದ, ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಹಿನ್ನೆಲೆಯಲ್ಲಿ ಮತ್ತು ಈ ನ್ಯಾಯಾಲಯ ನೀಡಿದ ಅನೇಕ ತೀರ್ಪುಗಳ ಹಿನ್ನಲೆಯಲ್ಲಿ ದಾಂಪತ್ಯದ ನಷ್ಟದ ಸಲುವಾಗಿ 50,0000/– ರೂಪಾಯಿಗಳಿಗೆ ಬದಲಾಗಿ 1,00,000/– ರೂಪಾಯಿಗಳು ಪ್ರೀತಿ ಮತ್ತು ವಾತ್ಸಲ್ಯದ ನಷ್ಟದ ಸಲುವಾಗಿ 50,000/– ರೂಪಾಯಿಗಳಿಗೆ ಬದಲಾಗಿ 1,25,000/– ರೂಪಾಯಿಗಳು. ಮೃತ ದೇಹ ಸಾಗಾಣಿಕೆ ಮತ್ತು ಶವ ಸಂಸ್ಕಾರ ವೆಚ್ಚಗಳ ಸಲುವಾಗಿ ನ್ಯಾಯಾಧಿಕರಣ ನೀಡಿದ 30,000/– ರೂಪಾಯಿಗಳಿಗೆ ಬದಲಾಗಿ 25,000/– ರೂಪಾಯಿಗಳನ್ನು ನಾವು ನೀಡಿದ್ದೇವೆ ಮತ್ತು ಸಂಪದ

1. 2009 ಎಸಿಜೆ 1298

ನಷ್ಟದ ಸಲುವಾಗಿ ನ್ಯಾಯಾಧಿಕರಣ ನೀಡಿದ 25,000/– ರೂಪಾಯಿಗಳು ನ್ಯಾಯಸಮ್ಮತವಾಗಿದೆ ಮತ್ತು ಯುಕ್ತವಾಗಿದೆ ಹಾಗೂ ಅದರಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ. ಹೀಗಾಗಿ ಕ್ಲೇಮುದಾರರಿಗೆ ಪಾವತಿಸಿದ ಒಟ್ಟು ಪರಿಹಾರವು, ನ್ಯಾಯಾಧಿಕರಣದಿಂದ ನೀಡಿದ 8,03,000/– ರೂಪಾಯಿಗಳಿಗೆ ಬದಲಾಗಿ 12,11,000/–ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಹೀಗಾಗಿ ನಾವು (2)ನೇ ಅಂಶಕ್ಕೆ ಋಣಾತ್ಮಕವಾಗಿ ಉತ್ತರಿಸಿದೆ ಮತ್ತು ಪರಿಹಾರವನ್ನು ಹೆಚ್ಚಿಸಲಾಗಿದೆ.

13. ಇದಲ್ಲದೆ, ಕ್ಲೇಮುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಸರಿಯಾಗಿಯೇ ಸೂಚಿಸಿರುವಂತೆ, ದಿನಾಂಕ 05.12.2012ರಂದು ಅಪಘಾತ ಸಂಭವಿಸಿದ್ದು, ನ್ಯಾಯಾಧಿಕರಣ ನೀಡಿದ ವಾರ್ಷಿಕ ಶೇ.6ರಷ್ಟು ಬಡ್ಡಿಯ ದರವು ಅತ್ಯಂತ ಕಡಿಮೆಯಿದೆ. ಆದ್ದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಈ ನ್ಯಾಯಾಲಯ ವಿವಿಧ ತೀರ್ಪುಗಳಲ್ಲಿ ಹೇಳಲಾದ ಅನುಪಾತದ ಪ್ರಕಾರ ಹಾಗೂ ಈ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳನ್ನು ಸಹ ಪರಿಗಣಿಸಿ, ನಾವು ಯೋಗ್ಯವೆಂದು ಭಾವಿಸಿದ್ದೇವೆ ಮತ್ತು ಪರಿಹಾರವನ್ನು ಹೆಚ್ಚಿಸಿ, ನ್ಯಾಯಾಧಿಕರಣ ನೀಡಿದ, ವಾರ್ಷಿಕ ಶೇಕಡಾ 6ಕ್ಕೆ ಬದಲಾಗಿ ವಾರ್ಷಿಕ ಶೇಕಡಾ 9 ರಂತೆ ಬಡ್ಡಿಯ ದರವನ್ನು ನೀಡುವುದು ಸಮಂಜಸವಾಗಿದೆ.

14. ಈ ಪ್ರಕರಣದ ಸಂಗತಿಗಳನ್ನು ಮತ್ತು ಸಂದರ್ಭಗಳ ಹಿನ್ನಲೆಯಲ್ಲಿ ಮೇಲೆ ಹೇಳಲಾದಂತೆ ಅಪೀಲುದಾರರಿಂದ ದಾಖಲು ಮಾಡಿದ ಅಪೀಲನ್ನು ಭಾಗಶಃ ಅಂಗೀಕರಿಸಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಸದಸ್ಯರು, ಹೆಚ್ಚುವರಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಹಿರಿಯೂರು ಇವರು ಎಂ.ವಿ.ಸಿ.ಸಂ.25/ 2013 ರಲ್ಲಿ ಮಾಡಿದ, ಪ್ರಶ್ನಿತ ತೀರ್ಪು ಮತ್ತು ಐತೀರ್ಪು ದಿನಾಂಕ 2ನೇ ಆಗಸ್ಟ್ 2014ನ್ನು, ಈ ಮೂಲಕ ಮಾರ್ಪಡಿಸಲಾಗಿದ್ದು, ಅರ್ಜಿಯ ದಿನಾಂಕದಿಂದ, ನಗದೀಕರಣದ ದಿನಾಂಕದವರೆಗೆ ಹೆಚ್ಚಿಸಲಾದ ಮೊತ್ತದ ಮೇಲೆ ವಾರ್ಷಿಕ ಶೇಕಡಾ 9ರಂತೆ ಬಡ್ಡಿಯೊಂದಿಗೆ, ನ್ಯಾಯಾಧಿಕರಣ ನೀಡಿದ 8,03,000/–

ರೂಪಾಯಿಗಳಿಗೆ ಬದಲಾಗಿ, 12,11,000/- ರೂಪಾಯಿಗಳ ಮೊತ್ತವನ್ನು ನೀಡಲಾಗಿದೆ.

ಮೇಲೆ [1]ನೇ ಅಂಶಕ್ಕೆ ಉತ್ತರಿಸುವಾಗ ಚರ್ಚಿಸಿದಂತೆ ಮೋಟಾರು ಸೈಕಲ್ ಮಾಲೀಕನ ಕಡೆಯಿಂದ ಶೇ.15ರಂತೆ ನ್ಯಾಯಾಧಿಕರಣ ನಿಗದಿಪಡಿಸಿದ ಸಹಾಯಕಾರಿ ನಿರ್ಲಕ್ಷತೆಯು ನ್ಯಾಯಸಮ್ಮತ ಮತ್ತು ಯುಕ್ತವಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಅರ್ಜಿಯ ದಿನಾಂಕದಿಂದ ಬಿಡುಗಡೆಯ ದಿನಾಂಕದವರೆಗೆ, ಹೆಚ್ಚಿಸಿದ ಮೊತ್ತದ ಮೇಲೆ, ವಾರ್ಷಿಕ ಶೇ.9ರಂತೆ ಬಡ್ಡಿಯೊಂದಿಗೆ ನ್ಯಾಯಾಧಿಕರಣ ನೀಡಿದ 6,82,550/- ರೂಪಾಯಿಗಳಿಗೆ ಬದಲಾಗಿ 10,29,350/- ರೂಪಾಯಿಗಳು ಅಂದರೆ, 12,11,000/- ರೂಪಾಯಿಗಳ ಮೊತ್ತದ ಒಟ್ಟು ಪರಿಹಾರ ಶೇ.85ಕ್ಕೆ ಮಾತ್ರ ಹಕ್ಕುಳ್ಳವರಾಗಿರುತ್ತಾರೆ.

ಹೀಗಾಗಿ, ಅರ್ಜಿಯ ದಿನಾಂಕದಿಂದ, ಬಿಡುಗಡೆಯ ದಿನಾಂಕದವರೆಗೆ ವಾರ್ಷಿಕ ಶೇ.9 ಬಡ್ಡಿಯೊಂದಿಗೆ 3,46,800/- ರೂಪಾಯಿಗಳ ಮೊತ್ತದ ಮೂಲಕ ಪರಿಹಾರ ಹೆಚ್ಚಿಸಲಾಗಿದೆ.

ತೀರ್ಪಿನ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವಾರಗಳೊಳಗೆ, ಅರ್ಜಿಯ ಕ್ಲೇಮು ದಿನಾಂಕದಿಂದ ಬಿಡುಗಡೆಯ ದಿನಾಂಕದವರೆಗೆ, ವಾರ್ಷಿಕ ಶೇ.9ರಂತೆ ಅದರ ಮೇಲೆ ಬಡ್ಡಿಯೊಂದಿಗೆ ಹೆಚ್ಚಿಸಲಾದ ಪರಿಹಾರದ 3,46,800/- ರೂಪಾಯಿಗಳನ್ನು ಠೇವಣಿಯಿಡಲು ವಿಮಾ ಕಂಪನಿಗೆ ನಿರ್ದೇಶಿಸಲಾಗಿದೆ.

ಈ ಕೂಡಲೇ ವಿಮಾ ಕಂಪನಿಯು ಅಂಥ ಠೇವಣಿಯ ಮೇಲೆ, ದೀರ್ಘಕಾಲಿಕ ಬಡ್ಡಿಯನ್ನು ಪಡೆದುಕೊಳ್ಳಲು ಆಕೆಗೆ ಸ್ವಾತಂತ್ರ್ಯ ಮೀಸಲಿರಿಸಿದ್ದು, ಹದಿನೈದು ವರ್ಷಗಳಿಗೆ ನವೀಕರಿಸಬಹುದಾದಂತೆ ಹದಿನೈದು ವರ್ಷಗಳ ಅವಧಿಗಾಗಿ, ಯಾವುದೇ ಅನುಸೂಚಿತ/ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಗದಿತ ಠೇವಣಿಯಿಟ್ಟು 1ನೇ ಅಪೀಲುದಾರ ಮೃತನ ಪತ್ನಿಯ ಹೆಸರಿನಲ್ಲಿ, ಪ್ರಮಾಣಾನುಸಾರ ಬಡ್ಡಿಯೊಂದಿಗೆ 1,00,000/- ರೂಪಾಯಿಗಳ ಮೊತ್ತವನ್ನು ಠೇವಣಿಯಾಗಿಡತಕ್ಕದ್ದು.

21 ವರ್ಷಗಳು ತುಂಬುವವರೆಗೆ ಅವರ ಕಲ್ಯಾಣಕ್ಕಾಗಿ ಬಡ್ಡಿಯನ್ನು ದೀರ್ಘಕಾಲಿಕವಾಗಿ ಪಡೆದುಕೊಳ್ಳಲು 1ನೇ ಅಪೀಲುದಾರ/ತಾಯಿ ಮತ್ತು ಸಹಜ ಪೋಷಕರಿಗೆ ಸ್ವಾತಂತ್ರವನ್ನು ಮೀಸಲಿರಿಸಿದ್ದು, 22 ವರ್ಷಗಳಿಂದ 30 ವರ್ಷಗಳವರೆಗೆ ಅವರಿಗೆ ವಯಸ್ಸಾಗುವವರೆಗೆ ಯಾವುದೇ ಅನುಸೂಚಿತ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಗದಿಪಡಿಸಿದ ಠೇವಣಿಯಲ್ಲಿ, ಮೃತನ ಮಕ್ಕಳಾದ 2 ಮತ್ತು 3ನೇ ಅಪೀಲುದಾರರ ಹೆಸರುಗಳಲ್ಲಿ ಪ್ರಮಾಣಾನುಸಾರ ಬಡ್ಡಿಯೊಂದಿಗೆ ತಲಾ 50,000/- ರೂಪಾಯಿಗಳ ಮೊತ್ತವನ್ನು ಠೇವಣಿಯಾಗಿಡತಕ್ಕದ್ದು, ಅವರು, ದೀರ್ಘಕಾಲಿಕ ಬಡ್ಡಿಯನ್ನು ಪಡೆದುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

ಈ ಕೂಡಲೇ ಸಮಾನ ಪ್ರಮಾಣಾನುಸಾರದಲ್ಲಿ 1ನೇ ಅಪೀಲುದಾರ, 3 ಮತ್ತು 4ನೇ ಪ್ರತ್ಯರ್ಜಿದಾರರ ಹೆಸರಿನಲ್ಲಿ ಪ್ರಮಾಣಾನುಸಾರ ಬಡ್ಡಿಯೊಂದಿಗೆ ಉಳಿದಿರುವ 1,46,800/- ರೂಪಾಯಿಗಳ ಮೊತ್ತವನ್ನು ಬಿಡುಗಡೆಗೊಳಿಸತಕ್ಕದ್ದು.

ಅದಕ್ಕನುಸಾರವಾಗಿ ಕಚೇರಿಯು, ಐತೀರ್ಪು ಪಡೆದುಕೊಳ್ಳುವುದು.